ಫ್ಯಾಕ್ಸ್ : 0816-2255761
ದೂರವಾಣಿ : 2272280

# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು - 572 103

## ಅಂತಿಮ ವಿನ್ಯಾಸ ಅನುಮೋದನೆ ಆದೇಶ

**ವಿಷಯ :** ತುಮಕೂರು ನಗರದ **ಮರಳೂರು** ಗ್ರಾಮದ ಸರ್ವೆ ನಂಬರ್ 7/11 ರಲ್ಲಿ **ಒಟ್ಟು 0-24 ಗುಂಟೆ** ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಅಂತಿಮ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಬಗ್ಗೆ.

**ಉಲ್ಲೇಖ :**

1. ಶ್ರೀ ರಾಘವೇಂದ್ರರಾವ್ ಇವರ ಮನವಿ ದಿನಾಂಕ **21-07-2010**
2. ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ **ಎಎಲ್ಎನ್(ಟಿಎಂಕೆ)/ ಸಿಆರ್/10/2010-11 ದಿನಾಂಕ 14-06-2010**
3. ದಿನಾಂಕ **24-07-2010** ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **26** ರ ನಿರ್ಣಯ
4. ಪ್ರಾಧಿಕಾರಕ್ಕೆ ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಉದ್ಯಾನವನ ಹಾಗೂ ಸಿ.ಎ.ವಿನಾಯ್ತಿ, ರಿಂಗ್ ರಸ್ತೆ ಉತ್ತಮತೆ ಶುಲ್ಕ ಮತ್ತು ಸ್ಲಂಸೆಸ್ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ **21752 ರೂ.10,79,107** (ಹತ್ತು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಒಂದು ನೂರ ಏಳು ರೂಪಾಯಿಗಳು ಮಾತ್ರ) ದಿನಾಂಕ **14-07-2011** ಮತ್ತು ಮೇಲ್ವಿಚಾರಣಾ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ **23979 ರೂ.49,520** (ನಲವತ್ತೊಂಭತ್ತು ಸಾವಿರದ ಐದು ನೂರ ಇಪ್ಪತ್ತು ರೂಪಾಯಿಗಳು ಮಾತ್ರ) ದಿನಾಂಕ **19-03-2012**
5. ಈ ಕಛೇರಿಯ ಪ್ರಾಥಮಿಕ ಅನುಮೋದನೆ ಆದೇಶ ಸಂಖ್ಯೆ ತುನಪ್ರಾ/ನಯೋ/ ವಿನ್ಯಾಸ/48/2010-11 ದಿನಾಂಕ 22-07-2011
6. ಪ್ರಾಥಮಿಕ ಅನುಮೋದನೆ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿರುವ ಬಗ್ಗೆ ತಾಂತ್ರಿಕ ವಿಭಾಗದ ದೃಢೀಕರಣ ದಿನಾಂಕ 26-03-2012
7. ದಿನಾಂಕ **31-03-2012** ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **70** ರ ನಿರ್ಣಯ
8. ರಸ್ತೆಗಳ ಪ್ರದೇಶವನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೊಂದಾಯಿಸಿ ಕೊಟ್ಟಿರುವ ದಾನಪತ್ರದ ದಸ್ತಾವೇಜು ನಂ.**6418** ದಿನಾಂಕ **28-06-2012**
9. ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005

* * * * *

**ಪ್ರಸ್ತಾವನೆ :-**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿನ ಅರ್ಜಿದಾರರ ಮನವಿಯಲ್ಲಿ ತುಮಕೂರು ನಗರದ **ಮರಳೂರು** ಗ್ರಾಮದ ಸರ್ವೆ ನಂಬರ್ 7/11 ರಲ್ಲಿ **ಒಟ್ಟು 0-24 ಗುಂಟೆ** ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ಕೋರಲಾಗಿದೆ.

ಉಲ್ಲೇಖ (3) ರ ನಿರ್ಣಯದಂತೆ, ಉಲ್ಲೇಖ (4) ರಲ್ಲಿ ಅರ್ಜಿದಾರರು ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ (5) ರಲ್ಲಿ ಪ್ರಸ್ತಾವಿತ ಪ್ರದೇಶಕ್ಕೆ ಪ್ರಾಧಿಕಾರದಿಂದ ಪ್ರಾಥಮಿಕ ಅನುಮೋದನೆ ವಿನ್ಯಾಸ ನಕ್ಷೆ ತಯಾರಿಸಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಶೇಕಡ 60 ರಷ್ಟು ನಿವೇಶನಗಳನ್ನು ಮಾರಟಕ್ಕೆ ಬಿಡುಗಡೆ ಮಾಡಲಾಗಿತ್ತು. ಉಲ್ಲೇಖ (6) ರ ತಾಂತ್ರಿಕ ಶಾಖೆಯ ವರದಿಯಂತೆ ಬಡಾವಣೆಯಲ್ಲಿ ಡಾಂಬರೀಕರಣ, ಸಿವಿಲ್ ಅಭಿವೃದ್ಧಿ ಕೆಲಸಗಳು, ನೀರು ಸರಬರಾಜು ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಮುಂತಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.

ಉಲ್ಲಖ (7) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ, ಉಲ್ಲೇಖ (8) ರಲ್ಲಿ ರಸ್ತೆಗಳ ಪ್ರದೇಶವನ್ನು ದಾನಪತ್ರದ ಮೂಲಕ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರಿಗೆ ಹಸ್ತಾಂತರಿಸಲಾಗಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರಂತೆ ಅನುಮೋದಿಸಬಹುದಾಗಿರುತ್ತದೆ. ಉಲ್ಲೇಖ (9) ರ ಸರ್ಕಾರದ ಸುತ್ತೋಲೆಯಂತೆ ವಿನ್ಯಾಸದ ಶೇಕಡ 60 ರಷ್ಟು ನಿವೇಶನಗಳು ಅಂದರೆ 01, 02, 03, 04 ಮತ್ತು 07 ಒಟ್ಟು **05** ನಿವೇಶನಗಳನ್ನು ಉಲ್ಲೇಖ (5) ರ ಪ್ರಾಧಿಕಾರದ ಆದೇಶದಂತೆ ಬಿಡುಗಡೆಗೊಳಿಸಲಾಗಿತ್ತು. ಉಳಿದ ಶೇಕಡ 40 ರಷ್ಟು ನಿವೇಶನಗಳು ಅಂದರೆ 05 ಮತ್ತು 06 ಒಟ್ಟು **02** ನಿವೇಶನಗಳನ್ನು ಬಿಡುಗಡೆಗೊಳಿಸಿ ಅಂತಿಮ ವಿನ್ಯಾಸ ಅನುಮೋದನೆಯಾಗಬೇಕಾಗಿದ್ದು, ಕೆಳಕಂಡಂತೆ ಆದೇಶಿಸಿದೆ.

ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ
ಕೆಳಗುಂಬ ರಸ್ತೆ, ತುಮಕೂರು
ದಿನಾಂಕ :

ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/48/2010-11 1941 ದಿನಾಂಕ : 19-10-2012

ಅಂತಿಮ ವಿನ್ಯಾಸ ನಕ್ಷೆ ದೃಢೀಕರಣ

## ಆದೇಶ

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005 ರಂತೆ ತುಮಕೂರು ನಗರದ **ಮರಳೂರು** ಗ್ರಾಮದ ಸರ್ವೆ ನಂಬರ್ **7/11** ರಲ್ಲಿ **ಒಟ್ಟು 0-24 ಗುಂಟೆ** ಪ್ರದೇಶದಲ್ಲಿ ರಚಿಸಲಾಗಿರುವ ವಸತಿ ಉದ್ದೇಶದ ವಿನ್ಯಾಸವನ್ನು ಅಂತಿಮವಾಗಿ ಅನುಮೋದಿಸಿದೆ. ಈ ವಿನ್ಯಾಸದಲ್ಲಿನ ಶೇಕಡ 40 ರಷ್ಟು ನಿವೇಶನಗಳ ಸಂಖ್ಯೆ ಅಂದರೆ 05 ಮತ್ತು 06 ಒಟ್ಟು **02** ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಅಂತಿಮ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆಯು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

**ನಿಬಂಧನೆಗಳು:-**

1. ವಿನ್ಯಾಸದಲ್ಲಿನ ನಿವೇಶನಗಳನ್ನು ಅನುಮೋದಿಸಲಾದ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು. ನಿವೇಶನಗಳನ್ನು ಉಪವಿಭಜಿಸುವುದು / ಒಟ್ಟು ಗೂಡಿಸುವುದನ್ನು, ಅಳತೆಗಳನ್ನು ಮಾರ್ಪಾಡು ಮಾಡುವುದನ್ನಾಗಲೀ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಮಾಡತಕ್ಕದ್ದಲ್ಲ.
2. ವಿನ್ಯಾಸದಲ್ಲಿ ವಸತಿಗಾಗಿ **1749.76** ಚ.ಮೀ. (ಶೇಕಡ **72.03**); ರಸ್ತೆಗಳಿಗೆ **471.38** ಚ.ಮೀ. (ಶೇಕಡ **19.38**); ನಾಗರಕಟ್ಟೆ **208.85** ಚ.ಮೀ. (ಶೇಕಡ **08.59**) ಪ್ರದೇಶ ನಿಗಧಿಪಡಿಸಿದೆ. ವಸತಿ ವಿಸ್ತೀರ್ಣದಲ್ಲಿ ಅನುಮೋದಿತ ನಕ್ಷೆಯಲ್ಲಿ ತೋರಿಸಿರುವಂತೆ ಅನಿಯಮಿತ ಅಳತೆಯ **02** ನಿವೇಶನಗಳಿರುತ್ತವೆ.
3. ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಮೊದಲು ಸ್ಥಳೀಯ ಸಂಸ್ಥೆಯಿಂದ ಅಗತ್ಯ ಕಟ್ಟಡ ಪರವಾನಗಿ / ಪ್ರಾರಂಭಿಕ ಪ್ರಮಾಣ ಪತ್ರ ಪಡೆದು ಅನುಮೋದಿತ ಕಟ್ಟಡ ನಕ್ಷೆಯಂತೆಯೇ ಕಟ್ಟಡ ನಿರ್ಮಿಸತಕ್ಕದ್ದು.
4. ಮೇಲ್ಕಂಡ ಯಾವುದೇ ನಿಬಂಧನೆಯನ್ನಾದರೂ ಪಾಲಿಸದೇ ಇದ್ದಲ್ಲಿ; ನೀಡಲಾದ ಮಾಹಿತಿ / ದಾಖಲಾತಿ ತಪ್ಪು ಎಂದು ಕಂಡು ಬಂದಲ್ಲಿ ವಿನ್ಯಾಸವನ್ನು ಯಾವುದೇ ತಿಳುವಳಿಕೆ ನೀಡದೇ ರದ್ದುಪಡಿಸುವ ಅಥವಾ ಇತರೇ ಯಾವುದೇ ನಿಬಂಧನೆ ವಿಧಿಸುವ ಅಧಿಕಾರ ಪ್ರಾಧಿಕಾರಕ್ಕೆ ಇರುತ್ತದೆ.
5. ವಿನ್ಯಾಸ ಪ್ರದೇಶದ ಗಡಿಗಳು, ನಿವೇಶನದ ಗಡಿಗಳಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರು ಉಂಟಾದಲ್ಲಿ ವಿನ್ಯಾಸ/ನಿವೇಶನ ಮಾಲೀಕರೇ ತಮ್ಮ ಸ್ವಂತ ಜವಾಬ್ದಾರಿಯಲ್ಲಿ ಬಗೆಹರಿಸಿಕೊಳ್ಳತಕ್ಕದ್ದು ಹಾಗೂ ಈ ಅನುಮತಿಯ ಸಿವಿಲ್ ವ್ಯಾಜ್ಯಗಳಿಗೆ ಹೊರತಾಗಿದೆ.

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

**ಶ್ರೀ ರಾಘವೇಂದ್ರರಾವ್**
ಬಿನ್ ವೆಂಕಟರಾವ್
ಮರಳೂರು
ತುಮಕೂರು

**ಪ್ರತಿಯನ್ನು :-**

1. ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಗೆ ವಿನ್ಯಾಸ ನಕ್ಷೆಯೊಂದಿಗೆ ರವಾನಿಸುತ್ತಾ ವಿನ್ಯಾಸದ ನಕ್ಷೆಯಂತೆ ನಿಯಮಾನುಸಾರ ನಿವೇಶನಗಳ ಖಾತಾ ಮಾಡಬಹುದು ಹಾಗೂ ಕಟ್ಟಡ ನಿರ್ಮಾಣಕ್ಕೆ ಅನುಮತಿಸಬಹುದೆಂದು ತಿಳಿಸಲಾಗಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಕಛೇರಿ ಪ್ರತಿ.






## KEY PLAN

## LAND USE ANALYSIS

| USE | AREA IN SQ M | % |
|---|---|---|
| RESIDENTIAL | 1749.76 | 72.03 |
| NAGARA KATTE | 208.85 | 08.59 |
| ROADS | 471.38 | 19.38 |
| TOTAL | 2428.99 | 100.00 |

SCALE 1:600

## INDEX

| SIZE | SITE NOS | TOTAL |
|---|---|---|
| 12.20X22.85 | 1,2,3,4 | 4 |
| 9.14XODD | 7 | 1 |
| ODD | 5,6 | 2 |
| TOTAL | | 7 |

OWNER: RAGAVENDRA RAO

GOVERNMENT OF KARNATAKA
TUMKUR URBAN DEVELOPMENT AUTHORITY
TUMKUR

TOWN PLANNING MEMBER
T U D A
TUMKUR

COMMISSIONER
T U D A
TUMKUR

DRN BY | CKD BY | DRG NO

TITTLE: APPROVED RESIDENTIAL LAY OUT PLAN IN SY NO 7/10 OF MARALUR VILLAGE TUMKUR

EXTENT : 0A - 09 GTS